# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 40 |
| ಸದಸ್ಯರ ಹೆಸರು | ಶ್ರೀ ಕೆ.ಸಿ. ಕೊಂಡಯ್ಯ |
| ಉತ್ತರಿಸುವ ದಿನಾಂಕ: | 19-12-2018 |
| ಉತ್ತರಿಸುವವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ವಿವಿಧ ಜಿಲ್ಲೆಗಳಲ್ಲಿನ ಎಷ್ಟು ದೇವಸ್ಥಾನಗಳಿಗೆ ಜೀರ್ಣೋದ್ಧಾರಕ್ಕಾಗಿ/ಅಭಿವೃದ್ಧಿ ಮತ್ತು ಮೂಲಭೂತ ಸೌಲಭ್ಯಕ್ಕಾಗಿ ಎಷ್ಟು ಹಣ ಬಿಡುಗಡೆಗೊಳಿಸಲಾಗಿದೆ; | 2018-19ನೇ ಸಾಲಿನಲ್ಲಿ ರಾಜ್ಯದಲ್ಲಿರುವ ವಿವಿಧ ಜಿಲ್ಲೆಯಲ್ಲಿನ ದೇವಸ್ಥಾನಗಳಿಗೆ ಜೀರ್ಣೋದ್ಧಾರ /ಅಭಿವೃದ್ಧಿ ಮತ್ತು ಮೂಲಭೂತ ಸೌಲಭ್ಯಕ್ಕಾಗಿ ನವೆಂಬರ್ ಅಂತ್ಯದವರೆಗೆ ಈ ಕೆಳಕಂಡ ಯೋಜನೆಗಳಡಿ ಒಟ್ಟು ರೂ.4571.25 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದೆ. |

| ಕ್ರ. ಸಂ. | ಯೋಜನೆ | 2018-19 (ನವೆಂಬರ್ ಅಂತ್ಯದವರೆಗೆ) |
|---|---|---|
| | | (ಮೊತ್ತ ರೂ.ಲಕ್ಷಗಳಲ್ಲಿ) |
| 1. | ದುರಸ್ಥಿ/ಜೀರ್ಣೋದ್ಧಾರ/ ಅಭಿವೃದ್ಧಿ | 2546.25 |
| 2. | ಆರಾಧನಾ | 714.00 |
| 3. | ಪರಿಶಿಷ್ಟ ಜಾತಿ ಉಪಯೋಜನೆ | 1140.00 |
| 4. | ಗಿರಿಜನ ಉಪಯೋಜನೆ | 171.00 |
| | ಒಟ್ಟು | 4571.25 |

1. ದುರಸ್ಥಿ/ಜೀರ್ಣೋದ್ಧಾರ/ ಅಭಿವೃದ್ಧಿ ಯೋಜನೆ

   ಈ ಯೋಜನೆಯಡಿ ರಾಜ್ಯದ 688 ದೇವಸ್ಥಾನಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

2. ಆರಾಧನಾ/ಪರಿಶಿಷ್ಟ ಜಾತಿ ಉಪಯೋಜನೆ/ ಗಿರಿಜನ ಉಪಯೋಜನೆ,

   ಈ ಮೂರು ಯೋಜನೆಗಳಡಿಯಲ್ಲಿ ವಿಧಾನ ಸಭಾ ಕ್ಷೇತ್ರವಾರು ನಾಲ್ಕು ಸಮಾನ ತ್ರೈಮಾಸಿಕ ಕಂತುಗಳಲ್ಲಿ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಅನುದಾನಕ್ಕೆ ಸಂಬಂಧಿಸಿದಂತೆ ಯೋಜನೆಯ ಮಾರ್ಗಸೂಚಿಗಳ ರೀತ್ಯಾ ರಚಿಸಿರುವ ಜಿಲ್ಲಾ/ಆರಾಧನಾ ಸಮಿತಿಯು ಆಯ್ಕೆ ಮಾಡಿದ ಧಾರ್ಮಿಕ ಸಂಸ್ಥೆಗೆ ಅನುದಾನ ಬಿಡುಗಡೆ ಮಾಡಲು ಜಿಲ್ಲಾಧಿಕಾರಿಗಳು ಕ್ರಮ ವಹಿಸುತ್ತಾರೆ. ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಬಿಡುಗಡೆ ಮಾಡಿದ ವಿವರ ಕೆಳಗಿನಂತಿದೆ.

**(ಮೊತ್ತ ರೂ.ಲಕ್ಷಗಳಲ್ಲಿ)**

| ಆರ್ಥಿಕ ವರ್ಷ | ಆರಾಧನಾ ಯೋಜನೆ | ಪರಿಶಿಷ್ಟ ಜಾತಿ ಉಪಯೋಜನೆ | ಗಿರಿಜನ ಉಪಯೋಜನೆ | ಒಟ್ಟು |
|---|---|---|---|---|
| 2018-19 (ನವೆಂಬರ್ ಅಂತ್ಯದವರೆಗೆ) | 3.18 | 5.08 | 0.76 | 9.02 |

. . . 2

| | | |
|---|---|---|
| ಆ) | ಬಿಡುಗಡೆಗೊಳಿಸಿರುವ ಹಣವನ್ನು ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಉಪಯೋಗಿಸಲಾಗಿದೆಯೇ; (ವಿವರ ನೀಡುವುದು) | ಮೇಲಿನ ಯೋಜನೆಗಳಡಿಯಲ್ಲಿ ಮಂಜೂರಾದ ಸಂಪೂರ್ಣ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಅನುದಾನಕ್ಕೆ ಸಂಬಂಧಿಸಿದಂತೆ ಯೋಜನೆವಾರು ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಸದರಿ ಮಾರ್ಗಸೂಚಿಗಳ ರೀತ್ಯಾ ಜಿಲ್ಲಾಧಿಕಾರಿಗಳು ಧಾರ್ಮಿಕ ಸಂಸ್ಥೆಗಳ ಜೀರ್ಣೋದ್ಧಾರ ಮಾಡಲು ಕ್ರಮ ವಹಿಸುತ್ತಾರೆ. |
| ಇ) | ಬಳ್ಳಾರಿ ಜಿಲ್ಲೆಯಾದ್ಯಂತ ಎಷ್ಟು ದೇವಸ್ಥಾನಗಳ ಜೀರ್ಣೋದ್ಧಾರ/ ಅಭಿವೃದ್ಧಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಬಿಡುಗಡೆ ಮಾಡಿರುವ ಹಣವನ್ನು ಎಷ್ಟು ದೇವಸ್ಥಾನಗಳಿಗೆ ಉಪಯೋಗಿಸಲಾಗಿದೆ; ಉಪಯೋಗಿಸದಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು? (ವಿವರ ನೀಡುವುದು) | 2018-19ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ವಿವಿಧ ಯೋಜನೆಗಳಡಿ ಒಟ್ಟು ರೂ.168.18 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br>**ಯೋಜನೆವಾರು ವಿವರ ಕೆಳಕಂಡಂತಿದೆ.**<br>1. ದುರಸ್ತಿ/ಜೀರ್ಣೋದ್ಧಾರ/ ಅಭಿವೃದ್ಧಿ ಯೋಜನೆ<br>ಈ ಯೋಜನೆಯಡಿ ಬಳ್ಳಾರಿ ಜಿಲ್ಲೆಯ 26 ದೇವಸ್ಥಾನಗಳ ಜೀರ್ಣೋದ್ಧಾರ/ಅಭಿವೃದ್ಧಿಗೆ ರೂ.87.00ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.<br>2. ಆರಾಧನಾ/ಪರಿಶಿಷ್ಟಜಾತಿ ಉಪಯೋಜನೆ/ಗಿರಿಜನ ಉಪಯೋಜನೆ<br>ಈ ಮೂರು ಯೋಜನೆಗಳಡಿ ಬಳ್ಳಾರಿ ಜಿಲ್ಲೆಯ 9 ವಿಧಾನ ಸಭಾ ಕ್ಷೇತ್ರಗಳಿಗೆ ಒಟ್ಟು ರೂ.81.18 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.<br>ಮೇಲಿನ ಯೋಜನೆಗಳಡಿಯಲ್ಲಿ ಮಂಜೂರಾದ ಸಂಪೂರ್ಣ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಅನುದಾನಕ್ಕೆ ಸಂಬಂಧಿಸಿದಂತೆ ಯೋಜನೆವಾರು ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಸದರಿ ಮಾರ್ಗಸೂಚಿಗಳ ರೀತ್ಯಾ ಜಿಲ್ಲಾಧಿಕಾರಿಗಳು ಧಾರ್ಮಿಕ ಸಂಸ್ಥೆಗಳ ಜೀರ್ಣೋದ್ಧಾರ ಮಾಡಲು ಕ್ರಮ ವಹಿಸುತ್ತಾರೆ.<br>ಅನುದಾನ ಬಿಡುಗಡೆಗೊಳಿಸಿದ ನಂತರ ಇದನ್ನು ಉಪಯೋಗಿಸಿಕೊಳ್ಳಲು ಆರ್ಥಿಕ ವರ್ಷದ ಅಂತ್ಯದ ವರೆಗೂ ಅವಕಾಶವಿರುತ್ತದೆ. |

(ಸಂಖ್ಯೆ: ಕಂಇ 170 ಮುಸಪ್ರ 2018)

**(ರಾಜಶೇಖರ.ಬಿ. ಪಾಟೀಲ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮುಜರಾಯಿ ಸಚಿವರು